"ಸಂಜೀವಿನಿ" - ಕೆಎಸ್‌ಆರ್‌ಎಲ್‌ಪಿಎಸ್
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂ: ಸಂಜೀವಿನಿ/ಎಲ್‌ಹೆಚ್/ಪಶುಭಾಗ್ಯ/62/2015-16 ದಿನಾಂಕ: 15.06.2016.

## ಅಧಿಕೃತ ಜ್ಞಾಪನ

ವಿಷಯ: ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ "ಪಶುಭಾಗ್ಯ" ಯೋಜನೆಯಡಿ ಆಯ್ಕೆಯಾಗಿರುವ ಅರ್ಹ ಫಲಾನುಭವಿಗಳಿಗೆ ಸಂಜೀವಿನಿ ಯೋಜನೆ ಸಹಭಾಗಿತ್ವದಲ್ಲಿ ಮೊದಲ ಹಂತದ 3 ದಿನಗಳ ವಸತಿ ರಹಿತ ತರಬೇತಿ ಆಯೋಜಿಸಲು ಅಗತ್ಯ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ ರವರ ಪತ್ರ ಸಂಖ್ಯೆ: ಆಪಸಂ/ಪಶುಭಾಗ್ಯ ತರಬೇತಿ/2016-17, ದಿನಾಂಕ: 18.05.2016.
2. ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ ರವರ ಪತ್ರ ಸಂಖ್ಯೆ: ಆಪಸಂ/ಪಶುಭಾಗ್ಯ ತರಬೇತಿ/2016-17, ದಿನಾಂಕ: 23.02.2016.
3. ಈ ಕಛೇರಿಯ ಪತ್ರ ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/ಎಲ್‌ಹೆಚ್/ಪಶುಭಾಗ್ಯ/62/2015-16, ದಿನಾಂಕ: 13.08.2015.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶು ಸಂಗೋಪನೆ ಮೀನುಗಾರಿಕೆ ರವರ ಕಡತ ಪತ್ರ ಸಂಖ್ಯೆ : ಪಸಂಮೀ/62/ಪಾಪಾಯೋ/2015 (ಭಾಗ-2 ಮತ್ತು ಭಾಗ-5) ದಿನಾಂಕ: 26.06.2015.

******

**ಪ್ರಸ್ತಾವನೆ:-**

ಕರ್ನಾಟಕ ಸರ್ಕಾರದ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ವತಿಯಿಂದ 'ಪಶುಭಾಗ್ಯ' ಯೋಜನೆಯನ್ನು 2015-16ನೇ ಸಾಲಿನಿಂದ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಪಶುಭಾಗ್ಯ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಉಲ್ಲೇಖ (3)ರಂತೆ ಕಡತದಲ್ಲಿ ಅಭಿಪ್ರಾಯ ನೀಡುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರನ್ನು ಕೋರಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು, ರಾಜೀವ್‌ಗಾಂಧಿ ಚೈತನ್ಯ ಯೋಜನೆಯ ಫಲಾನುಭವಿಗಳು ಹಾಗೂ ಇತರೆ ಸಾಮಾನ್ಯ ಫಲಾನುಭವಿಗಳು 'ಪಶುಭಾಗ್ಯ' ಯೋಜನೆಯ ಫಲಾನುಭವಿಗಳಾಗಿದ್ದ ಪಕ್ಷದಲ್ಲಿ ಕೆಎಸ್‌ಆರ್‌ಎಲ್‌ಪಿಎಸ್ ಸಹಯೋಗದೊಂದಿಗೆ ಅಗತ್ಯ ತರಬೇತಿಗಳನ್ನು ಪಶುಸಂಗೋಪನೆ ಇಲಾಖೆ, ಕೆಎಂಎಫ್, ಕೆವಿಕೆ, ಆರ್‌ಸೆಟಿ ಹಾಗೂ ಇನ್ನಿತರೆ ತರಬೇತಿ ಕೇಂದ್ರಗಳ ಮೂಲಕ ಆಯೋಜಿಸಲು 5ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

ಪಶುಭಾಗ್ಯ ಯೋಜನೆಯಡಿ 2015–16ನೇ ಸಾಲಿನಲ್ಲಿ ಹೈನುಗಾರಿಕೆ, ಕುರಿ/ಮೇಕೆ ಮತ್ತು ಹಂದಿ ಸಾಕಾಣಿಕೆ ಘಟಕಗಳಡಿ ಒಟ್ಟು 15748 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಉಲ್ಲೇಖ (2)ರಲ್ಲಿ ಪತ್ರದಲ್ಲಿ ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ರವರು ತಿಳಿಸಿರುತ್ತಾರೆ.

ಮೊದಲನೇ ಹಂತದಲ್ಲಿ 2438 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 3 ದಿನಗಳ ವಸತಿ ಸಹಿತ ತರಬೇತಿ ಹಮ್ಮಿಕೊಳ್ಳಲು ರೂ.36.57 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. 2015–16ನೇ ಸಾಲಿನಲ್ಲಿ ಬಾಕಿ ಉಳಿದ 13310 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 2016–17ನೇ ಸಾಲಿನಲ್ಲಿ ತರಬೇತಿ ಹಮ್ಮಿಕೊಳ್ಳಲು ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಉಲ್ಲೇಖ (1)ರಲ್ಲಿ ಮನವಿ ಮಾಡಿರುತ್ತಾರೆ.

2016–17ನೇ ಸಾಲಿನಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ 13310 ಫಲಾನುಭವಿಗಳಿಗೆ 3 ದಿನಗಳ ವಸತಿ ರಹಿತ ತರಬೇತಿಗೆ ರೂ.800/–ಗಳ ಘಟಕ ದರದಂತೆ ರೂ.106.48 ಲಕ್ಷಗಳಿಗೆ ಅಂದಾಜಿಸಲಾಗಿದೆ. ಮೊದಲನೇ ಹಂತದಲ್ಲಿ ಜುಲೈ, ಆಗಸ್ಟ್ ಮತ್ತು ಸೆಪ್ಟಂಬರ್ – 2016ರ ಮಾಹೆಗಳಲ್ಲಿ ಒಟ್ಟು 6655 ಫಲಾನುಭವಿಗಳಿಗೆ ಹಾಗೂ ಎರಡನೇ ಹಂತದಲ್ಲಿ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ 2016ರ ಮಾಹೆಗಳಲ್ಲಿ ಉಳಿದ 6665 ಫಲಾನುಭವಿಗಳಿಗೆ ತರಬೇತಿ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಮೊದಲನೇ ಹಂತದ ತರಬೇತಿಗಾಗಿ ರೂ.53.24 ಲಕ್ಷಗಳ ಅನುದಾನವನ್ನು ಮುಂಗಡವಾಗಿ ಆಯುಕ್ತರು, ಪಶುಪಾಲನಾ ಮತ್ತು ಪಶು ವೈಧ್ಯ ಸೇವಾ ಇಲಾಖೆ ರವರಿಗೆ ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

## ಆದೇಶ

**ಆದೇಶ ಸಂಖ್ಯೆ: ಸಂಜೀವಿನಿ/ಎಲ್‌ಹೆಚ್/ಪಶುಭಾಗ್ಯ/62/2015–16 ದಿನಾಂಕ: 15.06.2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ "ಪಶುಭಾಗ್ಯ" ಯೋಜನೆಯ 6665 ಫಲಾನುಭವಿಗಳಿಗೆ ಪಶುಪಾಲನಾ ಮತ್ತು ನಿರ್ವಹಣೆ ಕುರಿತು 3 ದಿನಗಳ ವಸತಿ ರಹಿತ ತರಬೇತಿ ಕಾರ್ಯಕ್ರಮವನ್ನು ಜುಲೈ, ಆಗಸ್ಟ್ ಮತ್ತು ಸೆಪ್ಟಂಬರ್ – 2016ರ ಮಾಹೆಯಲ್ಲಿ ವಿವಿಧ ತರಬೇತಿ ಕೇಂದ್ರಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲು ರೂ.53.24,000/– (ಐವತ್ಮೂರು ಲಕ್ಷದ ಇಪ್ಪತ್ನಾಲ್ಕು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮುಂಗಡವಾಗಿ ಹಣ ಬಿಡುಗಡೆ ಮಾಡಲು ಆದೇಶಿಸಿದೆ.

**ಷರತ್ತುಗಳು:–**

1. ಪಶುಭಾಗ್ಯ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಗಳು ದುರ್ಬಲ ವರ್ಗದ ಕುಟುಂಬದವರಾಗಿರಬೇಕು.

2. ತರಬೇತಿ ಆಯೋಜಿಸುವ ಮುನ್ನ ತರಬೇತಿ ಯೋಜನೆ ಮತ್ತು ತರಬೇತಿ ವೇಳಾ ಪಟ್ಟಿಯನ್ನು ಸಂಪನ್ಮೂಲ ವ್ಯಕ್ತಿಗಳ ವಿವರದೊಂದಿಗೆ ಅಭಿಯಾನ ನಿರ್ದೇಶಕರು ಸಂಜೀವಿನಿ ಹಾಗೂ ಆಯಾಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.
3. ತರಬೇತಿ ಕಾರ್ಯಕ್ರಮ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಆಯಾಯ ಜಿಲ್ಲೆಯ ಯೋಜನಾ ನಿರ್ದೇಶಕರು, ಡಿಆರ್‌ಡಿಎ, ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇತರೆ ಸಹ ಇಲಾಖೆಗಳ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕವಿಟ್ಟುಕೊಳ್ಳುವುದು.
4. ಪಶುಭಾಗ್ಯ ಯೋಜನೆಯ ಫಲಾನುಭವಿಗಳ ತರಬೇತಿಗೆ ಬಿಡುಗಡೆಯಾದ ಅನುದಾನವನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸುವಂತಿಲ್ಲ.
5. ಬಿಡುಗಡೆಯಾದ ಅನುದಾನದ ಖರ್ಚು ವೆಚ್ಚಗಳಿಗೆ ಸಂಬಂಧಿಸಿದ ಬಳಕೆ ಪ್ರಮಾಣ ಪತ್ರವನ್ನು ದಿನಾಂಕ: 30.09.2016 ರೊಳಗೆ ತಪ್ಪದೇ ಅಭಿಯಾನ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.
6. ಅನ್ವಯವಾಗುವ ಖರೀದಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
7. ಫಲಾನುಭವಿಗಳ/ಶಿಭಿರಾರ್ಥಿಗಳ ಸಂಪೂರ್ಣ ವಿವರಗಳನ್ನೊಳಗೊಂಡ (ಹೆಸರು, ಗ್ರಾಮ, ಗ್ರಾಮ ಪಂಚಾಯತ್, ತಾಲ್ಲೂಕು, ಜಿಲ್ಲೆ, ಜಾತಿ, ವಯಸ್ಸು, ಲಿಂಗ, ವಿದ್ಯಾರ್ಹತೆ ಆಯ್ಕೆ ಮಾಡಿಕೊಂಡ ಚಟುವಟಿಕೆ ಮತ್ತು ಮೊಬೈಲ್ ಸಂಖ್ಯೆ ಇತ್ಯಾಧಿ) ಪ್ರತಿ ತಂಡದ ತರಬೇತಿಯೋತ್ತರ ವರದಿಯನ್ನು (ಗುಂಪು ಫೋಟೋ ಸಹಿತ) ಇ-ಮೇಲ್ ಮತ್ತು ಮುದ್ರಿತ ಪ್ರತಿಯಲ್ಲಿ ಸಲ್ಲಿಸುವುದು.
8. ಮುಂಗಡವಾಗಿ ಕೆಎಸ್‌ಆರ್‌ಎಲ್‌ಪಿಎಸ್‌ನ ಪಾಲಿನ ಅನುದಾನದ ಮೊತ್ತವನ್ನು ಪಡೆಯಲು ಅವಶ್ಯವಿರುವ ಬೇಡಿಕೆ ಪ್ರಸ್ತಾವನೆ/ಕ್ಲೇಮ್ ಬಿಲ್ಲನ್ನು ಕೂಡಲೇ ಸಲ್ಲಿಸಲು ಕೋರಿದೆ.

ತಮ್ಮ ನಂಬುಗೆಯ,

(ಡಿ.ವಿ ಸ್ವಾಮಿ)
ಅಭಿಯಾನ ನಿರ್ದೇಶಕರು
"ಸಂಜೀವಿನಿ" ಕೆಎಸ್‌ಆರ್‌ಎಲ್‌ಪಿಎಸ್

**ಪ್ರತಿಯನ್ನು:**

1) ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು (ಹಣಕಾಸು) ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ರವರು ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಗೆ ಆದೇಶದನ್ವಯ ಅನುದಾನವನ್ನು ಬಿಡುಗಡೆ ಮಾಡಲು ಸೂಚಿಸಿದೆ.
2) ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು. ಇವರ ಆಪ್ತ ಕಾರ್ಯದರ್ಶಿಗಳಿಗೆ. ಗ್ರಾಅಪಂರಾ ಇಲಾಖೆ. ಬಹುಮಹಡಿಗಳ ಕಟ್ಟಡ. ಬೆಂಗಳೂರು.

5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಇವರ ಆಪ್ತ ಕಾರ್ಯದರ್ಶಿಗಳು. (ಪಂ.ರಾಜ್). ಗ್ರಾಅಪಂರಾ ಇಲಾಖೆ. ಬಹುಮಹಡಿಗಳ ಕಟ್ಟಡ, ಬೆಂಗಳೂರು.

6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು. ಬಹುಮಹಡಿ ಕಟ್ಟಡ, ಬೆಂಗಳೂರು.

7) ಸರ್ಕಾರದ ಕಾರ್ಯದರ್ಶಿಗಳು, (ವೆಚ್ಚ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ

8) ಸರ್ಕಾರದ ಕಾರ್ಯದರ್ಶಿಗಳು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.

9) ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ವಿವಿ ಟವರ್, ಬೆಂಗಳೂರು ರವರಿಗೆ ಕಳುಹಿಸುತ್ತಾ ಅನುದಾನ ಪಡೆದಿರುವುದಕ್ಕೆ ಕೂಡಲೇ ಸ್ವೀಕೃತಿ ಸಲ್ಲಿಸುವುದು.

10) ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ವಿವಿ ಟವರ್, ಬೆಂಗಳೂರು.

11) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

12) ವ್ಯವಸ್ಥಾಪಕ ನಿರ್ದೇಶಕರು, ಕೆಎಂಎಫ್, ಬೆಂಗಳೂರು.

13) ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ.ಟವರ್, ಬೆಂಗಳೂರು-560001.

14) ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, 2ನೇ ಮಹಡಿ, ಖನಿಜ ಭವನ(ಸರ್ಕಾರಿ ಬ್ಲಾಕ್) ರೇಸ್ ಕೋರ್ಸ್ ರಸ್ತೆ ಬೆಂಗಳೂರು.

15) ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.

16) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂರಾ ಇಲಾಖೆ ಇವರ ಆಪ್ತ ಸಹಾಯಕರಿಗೆ.

17) ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂರಾ ಇಲಾಖೆ, ಬೆಂಗಳೂರು.

18) ಶಾಖಾಧಿಕಾರಿ, ಪತ್ರ ಸ್ವೀಕಾರ ಮತ್ತು ರವಾನೆ ಶಾಖೆ, ಗ್ರಾಅಪಂರಾ ಇಲಾಖೆ.

19) ಗಣಕ ಕೋಶ, ಗ್ರಾಅಪಂರಾ ಇಲಾಖೆ, ಮುಂದಿನ ಕ್ರಮಕ್ಕಾಗಿ

20) ಎಲ್ಲಾ ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು, ಎಲ್ಲಾ ರಾಜ್ಯ ಸಹಾಯಕ ವ್ಯವಸ್ಥಾಪಕರು ಮತ್ತು ಜಿಲ್ಲಾ ಉಸ್ತುವಾರಿ ಅಧಿಕಾರಿಗಳು, ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ಇವರುಗಳು ತಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ ತರಬೇತಿ ನಡೆಯುವಾಗ ಕೇಂದ್ರಗಳಿಗೆ ಭೇಟಿ ನೀಡಿ ಮೇಲ್ವಿಚಾರಣೆ ನಡೆಸಲು ಸೂಚಿಸಿದೆ.

21) ಹೆಚ್ಚಿನ ಪ್ರತಿ.

ಅಭಿಯಾನ ನಿರ್ದೇಶಕರ ಕಛೇರಿ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ, 4ನೇ ಮಹಡಿ,
ರಿಸಾಲ್ದಾರ್ ಬೀದಿ, ಶೇಷಾದ್ರಿಪುರಂ, ಬೆಂಗಳೂರು-560020.ದೂರವಾಣಿ ಸಂಖ್ಯೆ: 080-23083000,
ಫ್ಯಾಕ್ಸ್ - 23083013 ಇ-ಮೇಲ್: nrlmkarnataka@gmail.com